**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಶಿಡ್ಲಘಟ್ಟ</u>**

**ಸಿ.ಸಿ ಸಂಖ್ಯೆ:286/2015**

**ಪ್ರಾ.ಸಾ.1**
**ಚಾ.ಸಾ.1**

**ದಿನಾಂಕಃ 20-12-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಹೆಸರು ಃ ಮುನಿರತ್ನಮ್ಮ**
**ಗಂಡನ ಹೆಸರು ಃ ವೆಂಕಟರಮಣಪ್ಪ**
**ವಯಸ್ಸು ಃ 39 ವರ್ಷ**
**ಕೆಲಸ ಃ ಗೃಹಿಣಿ**
**ವಾಸ ಸ್ಥಳ ಃ ಯರ್ರನಾಗೇನಹಳ್ಳಿ ಗ್ರಾಮ**
**<u>ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ</u>**

**ನನಗೂ, ಆರೋಪಿಗೂ ಮದುವೆ ಆಗಿ 20 ವರ್ಷ ಆಗಿದೆ. ಮದುವೆ ಆರೋಪಿಯ ಮನೆಯ ಮುಂದೆ ಆಗಿರುತ್ತದೆ. ಮದುವೆ ಸಮಯದಲ್ಲಿ ನನ್ನ ತಂದೆ ತಾಯಿ, ಆರೋಪಿಯ ಅಕ್ಕ, ತಂಗಿಯರು, ಸಂಬಂದಿಕರು ಮತ್ತು ಊರಿನ ಜನರೆಲ್ಲರೂ ಇದ್ದರು. ಮದುವೆ ನಂತರ ನನ್ನ ಗಂಡನ ಮನೆಯಲ್ಲಿಯೇ ವಾಸವಾಗಿದ್ದೆ. ನನಗೆ ಹೆಣ್ಣು ಮಗುವಾಗಿದ್ದು, ಮಗುವಿಗೆ 4 ವರ್ಷ ಆಗುವ ತನಕ ಚೆನ್ನಾಗಿದ್ದೆವು. ಆರೋಪಿಗೆ ಹೆಣ್ಣು ಚಟ ಇದ್ದು ಮತ್ತೊಂದು ಮದುವೆ ಮಾಡಿಕೊಳ್ಳಬೇಕೆಂದು ನನಗೆ ಕೆಟ್ಟ ಮಾತುಗಳಿಂದ ಬೈದು, ಹೊಡೆದು ಹಿಂತೆ ನೀಡುತ್ತಿದ್ದರು. ನನ್ನ ಮಗಳು ಇಲ್ಲದೇ ಇರುವ ಸಮಯದಲ್ಲಿ ನನಗೆ ಹೊಡೆದು ಹಿಂಸೆ ಕೊಡುತ್ತಿದ್ದರು. ಅರುಣ ಎಂಬ ಹುಡುಗಿಯನ್ನು ಆರೋಪಿಯು ಮದುವೆ ಮಾಡಿಕೊಂಡಿದ್ದು, ಅವರನ್ನು ಈ ಮನೆಗೆ ಕರೆದುಕೊಂಡು ಬರಬೇಕು ನೀನು ಮತ್ತು ಮಗಳು ಈ ಮನೆ ಕಾಲಿ ಮಾಡಿ ಎಂದು ಹೊಡೆದು ಹಿಂಸೆ ನೀಡುತ್ತಿದ್ದರು. ಮನೆ ಕಾಲಿ ಮಾಡದಿದ್ದರೆ ಹೊಡೆದು ಸಾಯಿಸುವುದಾಗಿ ಹೆದರಿಸುತ್ತಿದ್ದರು.**

ಈ ವಿಚಾರವಾಗಿ ಸುಮಾರು 5 ವರ್ಷಗಳ ಹಿಂದೆ ನಾನು ಪೋಲೀಸ್ ಠಾಣೆಗೆ ಹೋಡಿ ದೂರು ನೀಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಲಾಗಿ ಅದನ್ನು ನಿಪಿ.1 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.1ಎ ಎಂದು ಗುರುತಿಸಲಾಯಿತು. ದೂರು ನೀಡಿದ ಮಾರನೇಯ ದಿನ ಪೋಲೀಸರು ನಾವು ವಾಸವಾಗಿರುವ ಮನೆಯ ಬಳಿ ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ. ಸದರಿ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿಯು ನೋಡಿ ಗುರುತಿಸಲಾಗಿ ಅದನ್ನು ನಿಪಿ.2 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.2ಎ ಎಂದು ಗುರುತಿಸಲಾಯಿತು. ಪೋಲೀಸರು ಬೆಳಗ್ಗೆ 9.00 ಗಂಟೆಗೆ ಮನೆ ಬಳಿ ಬಂದಿದ್ದರು. ಮಹಜರ್ ಸಮಯದಲ್ಲಿ ಚಾ.ಸಾ.4 ಮತ್ತು 5 ರವರು ಹಾಜರಿದ್ದರು.

ಪಾಟೀಸವಾಲುಃ ಆರೋಪಿ ಪರ ವಕೀಲರಾದಃ ಶ್ರೀ.ಜಿ.ಕೆ.ಎನ್ ರವರಿಂದ

ಓ.ಎಸ್.10/2011 ರಂತೆ ಆರೋಪಿ ಮತ್ತು ಇತರರ ವಿರುದ್ದ ವಿಭಾಗಕ್ಕಾಗಿ ದಾವೆ ಹೂಡಿದ್ದೇನೆ ಎಂದರೆ ನನ್ನ ಮಗಳ ಹೆಸರಿನಲ್ಲಿ ಹೂಡಿರುತ್ತೇನೆ. ಆರೋಪಿಯ ವಿರುದ್ದ ಸಿಎಮ್‌ಸಿ 246/2013 ರಂತೆ ಜೀವನಾಂಶಕ್ಕಾಗಿ ಕೇಸು ಹಾಕಿದ್ದೇನೆಂದರೆ ಸರಿ. ಆರೋಪಿಯು ನನ್ನ ವಿರುದ್ದ ಓ.ಎಸ್.ನಂ.161/2014 ರಂತೆ ಶಾಶ್ವತ ನಿರ್ಬಂದಕಾಜ್ಞೆಗಾಗಿ ದಾವೆ ಹೂಡಿದ್ದಾರೆಂದರೆ ನನಗೆ ನೆನಪಿಲ್ಲ, ಓ.ಎಸ್.161/2014 ರಲ್ಲಿ ನಾನು ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದೇನೆಂದರೆ ಸುಮಾರು ಕೇಸುಗಳಲ್ಲಿ ಬರೆದಿದ್ದಾರೆ ಹಾಗಾಗಿ ಇರಬಹುದು.

ಈ ದೂರು ದಾಖಲಿಸುವ ಮೊದಲೂ ನನಗೂ ಮತ್ತು ಆರೋಪಿಗೂ ಆಸ್ತಿಗೆ ಸಂಬಂದಿಸಿದಂತೆ ವ್ಯಾಜ್ಯಗಳಿತ್ತು ಎಂದರೆ ಸರಿ ಅಲ್ಲ, ಆರೋಪಿಯು ನನ್ನ ವಿರುದ್ದ ಓ.ಎಸ್.161/2014ನ್ನು ದಾಖಲಿಸಿದ್ದಕ್ಕೆ ಪರತೀಕಾರವಾಗಿ ಈ ದೂರು ಸಲ್ಲಿಸಿದ್ದೇನೆಂದರೆ ಸರಿ ಅಲ್ಲ, ಆರೋಪಿಯು ಅರುಣಾ ಎನ್ನುವವರು ಮದುವೆ ಆಗಿದ್ದಾರೆಂದು ತೋರಿಸಲು ದಾಖಲೆಗಳು ನನ್ನ ಬಳಿ ಇಲ್ಲ.ಆರೋಪಿಯು ಅರುಣ ಎಂಬ ಹೆಸರಿನ ಹುಡುಗಿಯನ್ನು ನೋಡಿಲ್ಲ ಹಾಗಾಗಿ ಮದುವೆ ಆಗುವ ಪಮೇಯ ಬಂದಿಲ್ಲ ಎಂದರೆ ಸರಿ ಅಲ್ಲ.

ಆರೋಪಿಯು ದೈಹಿಕವಾಗಿ ಹಿಂಸೆ ನೀಡಿದ್ದ ಬಗ್ಗೆ ವೈದ್ಯಕೀಯ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆರೋಪಿಯು ಯಾವುದೇ ಹಿಂಸೆಯನ್ನು ನೀಡಿಲ್ಲ, ಅವರ ಆಸ್ತಿಯನ್ನು ಪಡೆಯುವ ಉದ್ದೇಶದಿಂದ ಈ ರೀತಿ ಸುಳ್ಳು ಕೇಸು ದಾಖಲು ಮಾಡಿದ್ದೇನೆಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ತೆರೆ ದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಸಾಕ್ಷಿಯ ಹೇಳಿ ಕೆಯನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

(ಶ್ರೀಮತಿ. ರೋಹಿಣಿ. ಡಿ)
ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ
ಶಿಡ್ಲಘಟ್ಟ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಶಿಡ್ಲಘಟ್ಟ**

**ಅಸಲು ದಾವಾ ಸಂಖ್ಯೆ. ಸಿ.ಸಿಃ**

**ಪ್ರಾ.ಸಾ.**

**ಚಾ.ಸಾ.**

**ದಿನಾಂಕಃ 28-06-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಹೆಸರು ಃ**
**ತಂದೆಯ ಹೆಸರುಃ**
**ವಯಸ್ಸು ಃ**
**ಕೆಲಸ ಃ**
**ಸ್ಥಳ ಃ**
**ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ**

**ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಾದಃ ಶ್ರೀ. ರವರಿಂದ**

**(ತೆರೆ ದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖ ನದಂತೆ ಸಾಕ್ಷಿಯ ಹೇಳಿ ಕೆಯನ್ನು ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**(ಶ್ರೀಮತಿ. ರೋಹಿಣಿ. ಡಿ)**
**ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ**

**ಶಿಡ್ಲಘಟ್ಟ.**